egistered No 1393

ಕಂಠೀರವ
KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ಸಂಪುಟ ೨೩ | ಮಂಗಳೂರು, ೧೯೪೨ನೇ ಇಸವಿ ಮಾರ್ಚ್ ತಾರೀಕು ೨೭ನೇ ಶುಕ್ರವಾರ | ಸಂಚಿಕೆ ೧೧
VOL. XXIII | MANGALORE, FRIDAY, MARCH 27, 1942 | NO.

ಭಾರತಕ್ಕೆ
ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರ ಆಗಮನ

ಸರ್ ಸ್ಟಾಫರ್ಡ್ ಕ್ರಿಪ್ಸರವರು, ನಿರೀಕ್ಷಿಸಿದ ಹೊತ್ತಿಗೆ ಸರಿಯಾಗಿ, ಕರಾಚಿಗೆ ವಿಮಾನದ ಮೂಲಕ ತಲುಪಿ, ಇಷ್ಟರಲ್ಲೇ ಡಿಲ್ಲಿಯನ್ನೂ ಸೇರಿರುವರೆಂದು ತಿಳಿದುಬಂದಿದೆ. ಅವರೊಡನೆ ಅವರ ಸಂಗಾತಿಗಳಾಗಿ ಮಿ. ಸ್ಪೇ. ಕೆನಡದ ಅರ್ಥಶಾಸ್ತ್ರಜ್ಞ ಮಿ. ಓವನ್ ಮತ್ತು ಇಂಡಿಯಾ ಆಫೀಸಿನ ಮಿ. ಟರ್ನ್‌ಬುಲ್ ಇವರೂ ದಯಮಾಡಿಸಿರುವರು.

ಈ ಮಹನೀಯರ ಭೇಟಿಮಾಡಲು ಬರಿಸದ ಪ್ರಧಾನರಾದ ಪಾರ್ಲಿಕಿಮಿಡಿ ಮಹಾರಾಜರೂ, ಚಕ್ತಾರೀ ಮಹಾರಾಜರೂ, ಹಲವು ಮಂದಿ ಗವರ್ನರರೂ ಡಿಲ್ಲಿಗೆ ತೆರಳಿರುವರು.

ಸರ್ ಕ್ರಿಪ್ಸರ ರಾಯಭಾರ ಕಾರ್ಯದ ಕುರಿತು!

ಈ ವಿಷಯದಲ್ಲಿ ಮಾಜೀ ಮದ್ರಾಸ್ [illegible]
ನರೂ, ಕಾಂಗ್ರೆಸ್ ವರ್ಕಿಂಗ್
ಸದಸ್ಯರೂ ಆಗಿರುವ ಶ್ರೀ. ಸಿ.
ಛಾಲಾಚಾರಿಯವರು, ಒಂದು
ಪ್ರಕಟಿಸಿ, ಅದರಲ್ಲಿ
ದಿದ್ದಾರೆ:—

ಪೂನಾದಿಂದ ಶ್ರೀ॥ ಬಿ॥ ಎ. ಎಸ್.
ಾಸ ಶಾ ಳು ಹೊರಡಿಸಿದ ಆ
ನೆಯ ಿ ಸ್ಮಿ ತ ನಾ ದೆ.
ತ್ತಿದ್ದರೂ,
ರ್ಪ್ರಕಾರದ
ಲ್ಲಿಯ್ ಾವೆ ಕಾಗಿದ್ದರೂ,
ಅವರಿಂದ ಸೂಚಿ ಆ ಕೆಲವು
ನುಡಿಗಳಿಂದ, ಜನರು ತಪ್ಪು ಹಾದಿಯಲ್ಲಿ ಬೀಳಬಾರದಾಗಿದೆ. ಬ್ರಿಟನಿನ ರಾಯಭಾರಿಗಳೀಗ ಇಂಡಿಯಕ್ಕೆ ದಯಮಾಡಿಸಿರುವುದು, ತೋರಿಕೆಯ ಮಟ್ಟಿಗೆ, ರಾಜಕೀಯ ಉದ್ದೇಶಕ್ಕಾಗಿ ಎಂದಿದ್ದರೂ ಅದರ ಪ್ರಾಮುಖ್ಯ, ಸ್ವಭಾವ, ಮಿಲಿಟರಿಯ ಚಾತುರ್ಯದ್ದಾಗಿದೆ. ಯುದ್ಧದ ಈ ಸಂದಿಗ್ಧ ಸಮಯದಲ್ಲಿ, ಅವರಿಲ್ಲಿಗೆ ಬಂದಿರುವುದು, ಇಂಡಿಯದ ರಕ್ಷಣೆಯ ಸ್ಥಾನದಲ್ಲಿ ಒಂದು ಮಹತ್ತಾದ ಬದಲಾವಣೆಯನ್ನು ದೊರಕಿಸಿಕೊಳ್ಳಲಿಕ್ಕಾಗಿ; ಇಂಡಿಯದಲ್ಲಿನ ಸಿವಿಲ್ ಆಡಳಿತವು, ಡೆಮೊಕ್ರೆಸಿಯ ಮಟ್ಟಿಗೆ ಕೆಟ್ಟದಾಗಿದೆ, ಅದನ್ನು ತಿದ್ದಬೇಕು ಎಂಬ ಕಾರಣಕ್ಕಾಗಿ ಎಂದಿಗೂ ಅಲ್ಲ; ಆ ರೀತಿ, ಎಂ. ಜಚರ್ಚಿಲರೇನೂ ಭಾವಿಸಿಲ್ಲ. ಸರ್ ಎಸ್. ಕ್ರಿಪ್ಸರ ಭಾರತದ ಸಂದರ್ಶನದ ಗುರಿಯು, ಇಂಡಿಯವನ್ನು ಸಾಧ್ಯವಿರುವಷ್ಟು ಮಟ್ಟಿಗೆ, ಅಭೇದ್ಯವಾಗಿ ಮಾರ್ಪಡಿಸುವುದು; ಮಲಯ ಬರ್ಮಗಳು ಜಪಾನಿಗೆ ಆಹುತಿಯಾದಷ್ಟು ಸುಲಭವಾಗಿ, ಇಂಡಿಯವೂ ಅವರ ಕೈಗೆ ಬೀಳದಂತೆ ನೋಡಿಕೊಳ್ಳುವುದು"

"ಆದುದರಿಂದ ಕೇಳುವುದೆಷ್ಟು, ತೆಗೆದುಕೊಳ್ಳುವುದೆಷ್ಟು" ಎಂಬಂತೆ, ಈ ರಾಜಕೀಯ ವ್ಯವಹಾರದಲ್ಲಿ ನಾವು ತರ್ಕಿಸುವುದಲ್ಲ. ಬ್ರಿಟನಿನ ಕಡೆಗೆ ಜನಗಳಿಗಿರುವ ಅನಾದರವನ್ನು ಹೋಗಲಾಡಿಸಲು ಯತ್ನವೇನು, ಮಿಲಿಟರಿ ವಿದ್ಯಮಾನಗಳ ವಿಚಾರದಲ್ಲಿ, ಭಾರತೀಯರಿಗಿರುವ ಅಸಡ್ಡೆಯನ್ನು ಹೋಗಲಾಡಿಸುವ ಬಗೆ ಹೇಗೆ ಎಂಬುದಷ್ಟೇ ನಮ್ಮ ಸದ್ಯದ ಸಮಾಲೋಚನೆಯಾಗಿರಬೇಕಾಗಿದೆ. ಈ ದೃಷ್ಟಿಯಿಂದ, ಶ್ರೀ. ಶಾಸ್ತ್ರಿಗಳು, ಇದನ್ನು ಎಮರ್ಶಿಸುವುದಾದರೆ, ಆಗ ಅವರಿಗೆ ತಿಳಿಯಬಹುದೇನೆಂದರೆ,-ಭಾರತದ ಮುಂದಾಳುಗಳು ತಮ್ಮ ಅಭಿಪ್ರಾಯವನ್ನು ಮಿತಗೊಳಿಸಿಕೊಳ್ಳಬೇಕಾದ ಆವಶ್ಯಕತೆ ಇಲ್ಲ; ಅಥವಾ ಅವರು ಬ್ರಿಟಿಷ್ ಕನಸರ್‌ವೇಟಿವರ ಮನೋಗತಕ್ಕೆ ತಕ್ಕಂತೆ, ತಮ್ಮ ಅಭಿಪ್ರಾಯಗಳನ್ನೂ ಹೊಂದಿಸಿಕೊಳ್ಳಬೇಕಾದ ಅಗತ್ಯವಿಲ್ಲ; ಮತ್ತೇನೆಂದರೆ, ಇಂಡಿಯದವರು ಯಾವುದಕ್ಕಾಗಿ ತಾವು ಕಾದಾಡುವುದೂ, ಕಾದಾಡಿ ಮಡಿಯುವುದೂ ಯೋಗ್ಯವೆಂದು ತಿಳಿಯುವರೋ ಅಂಥ ದೊಂದು ಘನ ಧ್ಯೇಯವನ್ನು ಬ್ರಿಟಿಶ್‌ರು ಚೆನ್ನಾಗಿ ಯೋಚಿಸಿ, ಜನತೆಯ ಮುಂದಿಡಬೇಕಾಗಿದೆ. ಈಗ ಸುತ್ತಿಕೊಂಡಿರುವ ವಿಪತ್ತು ದೂರ ಸರಿಯಬೇಕಾದಲ್ಲಿ, ಹಳೆಯ ಇಂಪೀರಿಯಲ್ ರೀತಿನೀತಿಗಳು ವ್ಯರ್ಥವೆಂದು ಬ್ರಿಟಿಶರು ಖಚಿತ ಮಾಡಿಕೊಳ್ಳಬೇಕಾಗಿದೆಯಲ್ಲದೆ; ಇಂಡಿಯದ ಜನರೂ, ಅವರ ನಾಯಕರೂ ತಮ್ಮ ಆತ್ಮರಕ್ಷಣೆಯ ಜವಾಬುದಾರಿಯನ್ನು ಜಾರಿಸಿ ಬಿಡಲಾಗದು, ಇನ್ನುಮುಂದಕ್ಕೆ ಅದನ್ನು ತಳ್ಳಲಾಗದು; ಹಾಗೂ ಈ ಸಮಸ್ಯೆಗೂ ಹೆಚ್ಚಾಗಿ ತಾವು ಇತರ ಯಾವ ಪ್ರಶ್ನೆಗಳ ವಿಚಾರದಲ್ಲಿಯೂ ಕೆಲಸಮಾಡಲಾಗದು ಎಂದೇ ಅವರೆಲ್ಲರೂ ತಿಳಿಯುವಂತೆ, ಬ್ರಿಟಿಶರು ತಕ್ಕ ಪ್ರಯತ್ನ ಮಾಡಲೂ ಬೇಕಾಗಿದೆ. ಅಂತರ ಜನಾಂಗಗಳಲ್ಲಿರುವ ಸಂದೇಹಗಳೂ ಮೇಲಾಟಗಳೂ ಶಾಂತಿಗಾಗಿ ಕಾದಿರಬಹುದಾದರೂ, ಜಗಳಗಂಟತನವು, ಆ ಶಾಂತಿಯನ್ನು ಕಾಯದೆಂದು ಮಾತ್ರವೇ ಅಲ್ಲ; ಆ ಸಂದೇಹ ಮೇಲಾಟಗಳ ಉಪಯೋಗವನ್ನೂ ಅದು ಮಾಡಿಕೊಳ್ಳದಿರದು".

"ನಾವೆಲ್ಲರೂ ಈಗ ಅನ್ವೇಷಿಸಬೇಕಾದುದೇನು? ರಾಷ್ಟ್ರೀಯ ಪ್ರಯತ್ನವನ್ನೂ, ತ್ಯಾಗವನ್ನೂ, ಯಾವುದು ಸ್ಫೂರ್ತಿಗೊಳಿಸುವುದೋ ಅಂಥ ಪ್ರೋತ್ಸಾಹಕರವಾದ ಮಾರ್ಗವನ್ನು! ಈ ಸಂಬಂ[illegible] ಜನಗಳನ್ನು ಎದೇಶೀಯರ ಜಾ[illegible] ತನದಿಂದ ಕಾಪಾಡು[illegible] ಸಿ[illegible] ಯನ್ನೂ, ಆದರವನ್ನು [illegible]ಪಾದಿಸು[illegible] ಒಂದು ತಾತ್ಕಾಲಿಕ [illegible]ಸ್ಥಾ[illegible] ಮುಂಡಲವು ಅಗತ್ಯ; ಅಂಗಗಳೂ ಮನಃಪೂರ್ವಕವಾದ ಪರಾಕ್ರಮಗಳ ಸಹಿತ ಪ್ರೋತ್ಸಾಹ ಕರಿಸುವರೆಂಬುದು ನಿಜ.

Applications are invited from qualified Allopathic Medical Practitioners to be appointed Rural Medical Practitioners on leave and other short vacancies in Rural Dispensaries under South Kanara District Board.

Applications with true copies of diplomas and other certificates, if any, regarding their experience etc. should reach the President, District Board by the 15th April 1942. The date of birth should also be specified in the application.

(Sd.) K. Vittal Shetty,
President,
Dt. Board, South Kanara.

Prefer the "POPULAR" for your Life Assurance

In patronising and co-operating with this Company, you promote the success of an institution of YOUR OWN District.

THE POPULAR INSURANCE CO., LTD.,
Head Office: MANGALORE, INDIA.

ಸ್ಕಿಳ ಕಲಿಜ ಮತ್ತು ಗುಲ್ಮ ರೋಗಗಳನ್ನು ಗುಣಪಡಿಸವೆ ಹಾಗೆಯೇ ಬಿಟ್ಟರುವುದು ಬಹಳ ಅಪಾಯಕರ. ಈ ರೋಗಗಳ ಪ್ರಥಮ ಚಿನ್ಹೆ ಕಂಡು ಬಂದಡೊನೆಯೇ ಕಳೆದ 35 ವರ್ಷ ಗಳಿಂದ ಹೆಸರು ಪಡೆದ ಈ ಆಶ್ಚರ್ಯಕರವಾದ ಔಷದಿಯನ್ನು ಉಪಯೋಗಿಸಿರಿ.

ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ–

ಜಮ್ಮಿ ವೆಂಕಟರಮಣಯ್ಯ ಎಂಡ್ ಸನ್ಸ್
1/1 ಬ್ರಾಡೀಸ್ ರೋಡ್, ಮೈಲಾಪುರ, ಮದ್ರಾಸು ಅಲ್ಲದೆ, ಮುಂಬಯಿ, ಕಲ್ಕತ್ತಾ, ಲಕ್ನೋ, ಬೆಂಗಳೂರು, ಮತ್ತು ತಿರುಚಿನಾಪಳ್ಳಿ.

MONEY TO LEND

Over Forty Lacs of idle funds are awaiting investment in the shape of loans on gold, Government securities, shares of approved companies, life insurance policies having sufficient surrender value, grains and other agricultural produce, etc., etc. You are cordially invited to utilize these facilities.

CANARA BANK, LIMITED.

ESTD: 1906.

ಕಂಠೀರವ
KANTEERAVA
KANARESE, BI-WEEKLY

XXIII] ಮಂಗಳೂರು, ತಾರೀಕು ೨೭—೩—೧೯೪೨ [೧೦೩
೧೮೬೪ ಚಿತ್ರಭಾನು ಸಂವತ್ಸರದ ಚೈತ್ರ ಶು ೧೦ ಶುಕ್ರವಾರ

ಸರ್ ಸ್ಟಾಫರ್ಡ್ ಕ್ರಿಪ್ಸ್‌ರ ಆಗಮನ

ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು, ಇದೀಗಲೇ ಭಾರತದ ರಾಯಭಾರಿಗಳಾಗಿ, ಇಂಡಿಯದ ರಾಜಕೀಯವಾದ ಕಗ್ಗಂಟನ್ನು ಬಿಡಿಸುವ ಅಧಿಕಾರ ಪಡೆದು, ದಿಲ್ಲಿಗೆ ದಯೆಮಾಡಿಸಿರುತ್ತಾರೆ. ಇವರ ಈ ಆಗಮನವು, ಭಾರತದ ಇತಿಹಾಸದಲ್ಲೇ, ಒಂದು ಮಹತ್ತಾದ ಘಟನೆ ಎಂಬುದರಲ್ಲಿ ಎರಡು ಅಭಿಪ್ರಾಯವಿಲ್ಲ.

ಸರ್ ಕ್ರಿಪ್ಸ್‌ರು, ಅಧಿಕಾರಿ ವರ್ಗದವರ ಆಡಂಬರಯುಕ್ತವಾದ ಕಾರ್ಯ ಕ್ರಮಗಳಲ್ಲಿಯೇ ಮುಳುಗಿ ಹೋಗಿ, ತಾವು ಬಂದ ಕಾರ್ಯಸಾಧನೆಯ ಉದ್ದೇಶವನ್ನು ಮರೆಯುವರೆಂಬ ಮಾತು ಇಲ್ಲಿ ಆಡಲು ಅವಕಾಶವಿಲ್ಲ. ಅವರು ಇಲ್ಲಿಗೆ ನಾನ್ ಆಫೀಶಿಯಲ್ ಇಂಡಿಯದ ಮುಂದಾಳುಗಳನ್ನು ಕಂಡು ಅವರ ಸೂಚನೆಗಳನ್ನು ಕೇಳಲು ಬಂದಿದ್ದಾರೆ. ಸಾಧ್ಯವಿದ್ದಿದ್ದರೆ, ಅಧಿಕಾರಿ ವರ್ಗವು ತಮ್ಮ "ರೆಡ್ ಟೇಪಿನ" ಚಿಕ್ಕ ಗಂಟುಗಳಿಂದ ಅವರನ್ನು ಕಟ್ಟಿಹಾಕಿ, ಅದರಲ್ಲೇ ಅವರು ಹೊರಳುವಂತೆ ಮಾಡುತ್ತಿದ್ದಿತಾದರೂ, ಸರ್ ಕ್ರಿಪ್ಸ್‌ರು ಹಾಗೆ ಮಾಡುವವರಲ್ಲವೆಂಬುದು, ಅವರಾಗಲೇ ನಮ್ಮ ಮುಂದಾಳುಗಳಿಗೆ ಕೊಟ್ಟ ಭೇಟಿಗಳಿಂದ ವ್ಯಕ್ತವಾಗುತ್ತದೆ.

ಅಷ್ಟೇ ಅಲ್ಲ; ಅವರು ಬಂದ ಕೂಡಲೇ, ಪತ್ರಿಕಾ ವ್ಯವಸಾಯಿಗಳಿಗೆ ಕೊಟ್ಟ ರುವ ಆ ಸಮರ್ಪಕ ಉತ್ತರವೂ, ಯಾವತ್ತು ಸಂದೇಹಗಳನ್ನೂ ನಿವಾರಿಸುವು ದಾಗಿದೆ. ಅವರು ಅದರಲ್ಲಿ, ಅಧಿಕಾರಿ ಮಂಡಲದಿಂದ ಯಾವ ತೊಂದರೆಗಳನ್ನೂ ತಾವು ನಿರೀಕ್ಷಿಸುವುದಿಲ್ಲವೆಂದು ಸ್ಪಷ್ಟವಾಗಿ ಆಡಿರುವುದು. "ನೀವು ಏನೂ ತೊಂದರೆ ಮಾಡಬೇಡಿ" ಎಂದು, ಅಧಿಕಾರಿ ವರ್ಗಕ್ಕೂ ಎಚ್ಚರಿಕೆ ಹೇಳಿದಂತಾಗಿದೆ. ಮುಖ್ಯವಾಗಿ, ಸರ್ ಕ್ರಿಪ್ಸ್‌ರು ತಾವು ಅಧಿಕಾರಿಗಳ ಹಂಗಿನಲ್ಲಿ ಇಲ್ಲವೆಂಬುದನ್ನು ತೋರಿಸಿಕೊಡಲು, ವೈಸರಾಯರ ಲಾಜಿನಲ್ಲಿ ತಾವು ಉಳಿದುಕೊಳ್ಳದೆ, ಬೇರೆ ಕಡೆ ಉಳಿದು, ಹಾಗೆ ಈ ಕಾರ್ಯಕ್ರಮಗಳು ಸ್ವತಂತ್ರವಾಗಿ ನಡೆಯಲು ಏರ್ಪಡಿಸಿರು ವುದೂ, ಆಗಾಗ ಯಾವ ತಡೆಯೂ ಇಲ್ಲದೆ, ಪ್ರೆಸ್ ಪ್ರತಿನಿಧಿಗಳು ತಮ್ಮನ್ನು ಕಂಡು, ನಿಜವಾದ ವಾರ್ತೆಗಳನ್ನು ಸಂಗ್ರಹಿಸಲು ಅವಕಾಶ ಕೊಟ್ಟಿರುವುದೂ ಸರ್ ಕ್ರಿಪ್ಸ್‌ರ ನಿಜವಾದ ಮನೋವೃತ್ತಿಯ ಪ್ರಶಂಸಾಪರವಾದ ಕಾರ್ಯಧೋರಣೆಯ ಒಂದು ಉಜ್ವಲ ದೃಷ್ಟಾಂತವಾಗಿದೆ.

ಈಗ ಇದರಲ್ಲಿ ಸರ್ ಕ್ರಿಪ್ಸ್‌ರು ಕೃತಾರ್ಥರಾಗಿ, ಇಂಡಿಯದ ರಾಜಕೀಯ ವಾದ ಕಗ್ಗಂಟನ್ನು ಬಿಡಿಸಲು ಶಕ್ತರಾದರೆಂದು ನಾವು ಇಟ್ಟುಕೊಂಡರೂ ಕೂಡ, ಇಂಡಿಯದವರೊಡನೆ "ಯುದ್ಧಕಾರ್ಯಗಳ ಕುರಿತಾಗಿ ನಡೆಸಬೇಕಾದ ಸಮಾ ಲೋಚನೆ"ಯ ಈ ಒಂದು ಪ್ರಶ್ನೆ, ಹಾಗೇ ಉಳಿಯುತ್ತಿದೆ ಎನ್ನಬೇಕು. ಸದ್ಯ, ಯುದ್ಧಕಾರ್ಯಗಳಿಗೆ ಸಂಬಂಧಿಸಿದ ಸಭೆಗಳಲ್ಲಿ, ಭಾರತಕ್ಕೆ ಶಾಸ್ತ್ರವಿಧಿಗಳಿಗೆ ಮಾತ್ರ ಒಪ್ಪುವ ಪ್ರಾತಿನಿಧ್ಯವಿದೆ; ಹಾಗೆ ಈ ನಮ್ಮ ಪ್ರತಿನಿಧಿಗಳು, ಸರಕಾರವು ಅವರಿಗೆ ಒದಗಿಸಿದ ಸೂಚನೆ, ಮಿತಿಮೇರೆಗಳೊಳಗೇ, ತಮ್ಮ ಪ್ರಾತಿನಿಧ್ಯ ನಿರ್ವಹಿಸಬಹುದಾಗಿದೆ. ಆದರೆ ಸರಕಾರವು ಜನರ ಪ್ರಾತಿನಿಧ್ಯವನ್ನು ನಿರ್ವಹಿಸುವುದಲ್ಲವಾದುದರಿಂದ, ಆ ಪ್ರತಿನಿಧಿಗಳೂ ಸರಕಾರದ ಕಡೆಯವರೆಂದೇ [illegible]ಳಬೇಕಾಗಿದೆ. ಮಾತ್ರವಲ್ಲ; ಒಂದು ಪಕ್ಷ, ನಮ್ಮ ಸರಕಾರವು, ಪ್ರಾಮುಖ್ಯವಾದ ಯುದ್ಧದ ವಿಚಾರಗಳಲ್ಲಿ ಭಿನ್ನಾಭಿಪ್ರಾಯಪಟ್ಟರೂ, ಆಗ ಬ್ರಿಟಿಷ್ ಸರಕಾರದ ಅಭಿಪ್ರಾಯವೇ, ಕೊನೆಗೆ ಮನ್ನಿಸಲ್ಪಡುವುದೆಂಬುದು ನಿರ್ವಿವಾದ. ಇದೆಲ್ಲವೂ, ಇಲ್ಲೊಂದು ರಾಷ್ಟ್ರೀಯ ಸರಕಾರದ ಸ್ಥಾಪನೆಯಾದಲ್ಲಿ ಮಾತ್ರ, ಬದಲಾಗುವುದು. ಈ ಸಂದರ್ಭದಲ್ಲಿ, ನಮ್ಮ ಪ್ರಭುತ್ವದವರು, ಎಲ್ಲ ಸೂಚನೆಗಳನ್ನೂ, ಇಂಡಿಯದ ಹಿತಾಸಕ್ತಿಯ ದೃಷ್ಟಿಯಿಂದಲೇ ಸಮಾಲೋಚಿಸಬೇಕೆಂದು ಒತ್ತಾಯಪಡಿಸುತ್ತಿರುವುದು ನ್ಯಾಯಸಮ್ಮತವಾಗಿದೆ. ಇದನ್ನು, ಈಗ, ಬ್ರಿಟಿಷ್ ಪ್ರಭುತ್ವವೂ ಮನ್ನಿಸದೆ ನಿರ್ವಾಹವಿಲ್ಲ. ಯಾರೇನೆಂದರೂ, ಅದನ್ನು ಕಿತ್ತುಹಾಕಿ, ತನ್ನ ಮಾತೇ ಇನ್ನೂ ನಡೆಯಬೇಕೆಂದು ಬ್ರಿಟಿಷ್ ಸರಕಾರವು, ತನ್ನ ಹಳೇ ಮಾಮೂಲನ್ನು ಜಲಾಯಿಸುವುದು, ಇಂದಿನ ಸಂದರ್ಭಗಳಿಗೆ, ಒಪ್ಪುವಂತದ್ದಲ್ಲ. ಸರ್ ಕ್ರಿಪ್ಸ್‌ರು, ತಮ್ಮ ರಾಯಭಾರದ ಪೂರೈಕೆಯೊಡನೆ, ಈ ಒಂದು ಅಂಶವನ್ನೂ ಬ್ರಿಟಿಷ್ ಸರಕಾರದ ಮುಂದಿರಿಸಿ, ಅದರ ನಿವೃತ್ತಿಗೂ ಮಾರ್ಗ ಕಲ್ಪಿಸಿಕೊಟ್ಟರೆ, ಆಗ ಭಾರತ ಬ್ರಿಟನುಗಳ ನೈಜ ಬಾಂಧವ್ಯದ ಹಾದಿಯಲ್ಲಿರುವ ಹೆಚ್ಚಿದ ವಿಡ್ಡೂರಗಳು ಪರಿಹಾರವಾಯಿತೆಂದು ತಿಳಿಯಬಹುದು.

ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿ ಪ್ರಕಟಣೆ

ನಮ್ಮ ಜಿಲ್ಲೆಯೊಳಗೆ ಕೊಂಗ್ರೆಸ್ ಸದಸ್ಯರನ್ನು ಸೇರಿಸುವ ಕಾರ್ಯದ ಮತ್ತು ಸರ್ಕಲ್ ಕೊಂಗ್ರೆಸ್ ಕಮಿಟಿಗಳ ಪುನರ್ಘಟನೆಯ ಸಂಬಂಧವಾಗಿ ಶ್ರೀ। ಕೆ. ಕೆ. ಪಿ. ರಾಮ ಪೊತುವಾಳ್, ಜೊಯಿಂಟ್ ಸೆಕ್ರೆಟರಿ, ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿ, ಇವರು ಸದ್ಯದಲ್ಲೆ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಕೈಕೊಳ್ಳಲಿರುವರು. ಆಯಾ ಸರ್ಕಲಿನ ಕೊಂಗ್ರೆಸ್ ಕಾರ್ಯಕರ್ತರು ಅವರಿಗೆ ಅವಶ್ಯವಿರುವ ಮಾಹಿತಿಯನ್ನು ಕೊಟ್ಟು, ಸಹಕರಿಸಬೇಕಾಗಿ ವಿನಂತಿ.

ಕುಡ್ಪಿ ವಾಸುದೇವ ಶೆಣೈ,
ತಾ. ೨೫–೩–'42 ಜಿಲ್ಲಾ ಸೆಕ್ರೆಟರಿ,
ದ. ಕ. ಜಿಲ್ಲಾ ಕಮಿಟಿ.

ಆಕಾಶವಾಣಿ ಮೈಸೂರು ಸಂಗೀತದ ಸುದ್ದಿ

ಮೈಸೂರು ಪ್ರಸನ್ನ ಸೀತಾ ರಾಮ ಮಂದಿರದಲ್ಲಿ, ಈ ವರ್ಷ ನಡೆಯುವ ರಾಮೋತ್ಸವದ ಅಮೋಘವಾದ ಸಂಗೀತ ಕಚೇರಿಗಳನ್ನು ಮಾರ್ಚಿ [illegible] ಕಾರದಿಂದ ಏಪ್ರಿಲ್ ೭ನೇ ಮಂಗಳವಾರದ ವರೆಗೆ ಪ್ರತಿದಿನವೂ ರಾತ್ರಿ ೮–೩೦ರಿಂದ ೯–೩೦ರ ತನಕ ಮೈಸೂರು ಆಕಾಶವಾಣಿ ಮೂಲಕ [illegible] ೪೪ ಮೀಟರುಗಳಲ್ಲಿ [illegible] ಮೇ ಆಗುವುದು. ಈ ಏರ್ಪಾಡಿನಿಂದ ಗೀತ ಪ್ರೇಮಿಗಳಾದ [illegible] ಂತರ ಜನರು ದಕ್ಷಿಣ ಭಾರತದ ಪ್ರ[illegible] ಎದ್ದಾರನ್ನು ಕೇಳಿ ಆನಂದ ಪಡೆಯಬಹುದೊರೆತಿದೆ. ಮತಿ, ಸುಲೋ[illegible] ಮತ್ತು ಶ್ರೀಯುತರು ಸರ್ವಶ್ರೀ ಸುಬ್ರಹ್ಮಣ್ಯಯ್ಯ[illegible] ಖಾನ್, ಬೈ, ಜಿ. ಯನ್. ಬಾಲಕೃಷ್ಣಾಣಂ, ಲಕ್ಷ್ಮೀ ನಾರಾಯಣ ಭಾಗವತರ್, ಸಿ. ಯಸ್. ಕೃಷ್ಣ ಅಯ್ಯರ್, ರಾಧಾಕೃಷ್ಣನ್, ತಿಟ್ಟ ಕೃಷ್ಣ ಅಯ್ಯಂಗಾರ್, ವಿ. ದೊಡ್ಡ ಸಾಮಿ ಅಯ್ಯಂಗಾರ್ ಮುಂತಾದವರು ಮೈಸೂರು ಆಸ್ಥಾನ [illegible]ವಿದ್ವಾನ್ ಸಂಗೀತ ರತ್ನ ಟಿ. ಚೌಡಯ್ಯ [illegible]ಮುಂತಾದವರ ಅಮೋಘವಾದ ಪಕ್ಕವಾದ್ಯಗಳೊಡನೆ ಆಕಾಶವಾಣಿ ಶ್ರೋತೃವೃಂದಕ್ಕೆ ಆನಂದ ವೀಯುವರು.

ವಿದೇಶ—ಹಿಂದೂದೇಶ

ಸರ್ ಸ್ಟಾಫರ್ಡ್ ಕ್ರಿಪ್ಸ್‌ರವಿನಂತಿ

ಡಿಲ್ಲಿಗೆ ದಯೆಮಾಡಿಸಿದವರೇ ಸರ್ ಕ್ರಿಪ್ಸ್‌ರವರು ಅಲ್ಲೊಂದು ಪತ್ರಿಕಾ ಉದ್ಯೋಗಿಗಳ ದೊಡ್ಡ ಪರಿಷತ್ತನ್ನು ಜರುಗಿಸಿದರು. ಡಿಲ್ಲಿಯಲ್ಲಿ ಹಿಂದೆಂದೂ ಕಾಣದಷ್ಟು ದೊಡ್ಡ ಸಂಖ್ಯೆಯ ಪತ್ರಿಕಾ ಉದ್ಯೋಗಿಗಳ ಒಂದು ಸಭೆಯೇ ಅಲ್ಲಿ ಸೇರಿತ್ತು. ಸರ್ ಕ್ರಿಪ್ಸ್‌ರು ಅವರ ಮುಂದೆ ತಮ್ಮ ಕಾರ್ಯಭಾರದ ಉದ್ದೇಶ, ಅದರ ಎಲ್ಲೆಕಟ್ಟುಗಳನ್ನು ಅವರ ಮುಂದೆ ವಿವರಿಸಿದರು. ಇಂಡಿಯದ ರಾಜಕೀಯವಾದ ಕಗ್ಗಂಟಿನ ತೀರ್ಮಾನವು ಎಷ್ಟು ಬೇಗ ಆದರೆ ಅಷ್ಟೂ ಒಳ್ಳೆಯದೆಂದೂ, ಆ ಸಮಸ್ಯೆಯ ನಿವೃತ್ತಿಯಿಂದ ಭಾರತವು ಬ್ರಿಟಿಶ್ ಮತ್ತು ಇತರ ಡೊಮಿನಿಯನ್‌ಗಳೊಡನೆ ಮಾತ್ರವಲ್ಲ, ಚೀನಾ ರಷ್ಯಗಳೊಡನೆ ಒಂದಾಗಿ ಜಗತ್ತಿನ ಸ್ವಾತಂತ್ರ್ಯವನ್ನು ಕಾಪಾಡುವಲ್ಲಿ ಇಂಡಿಯಕ್ಕಿರುವ ಧೃಡ ನಿರ್ಧಾರವನ್ನು ಪ್ರಕಟಿಸಲು ಅನುಕೂಲವಾಗುವುದೆಂದೂ ಅಡಿದರು. ಅಷ್ಟೇ ಅಲ್ಲ; ಅವರು ತಮ್ಮ ಈ ಕಾರ್ಯವು ಹೇಗೆ ಪ್ರಗತಿ ಹೊಂದುತ್ತಿದೆ ಎಂಬುದನ್ನು ಪತ್ರಿಕೆಗಳಿಗೆ ತಿಳಿಸುವುದಕ್ಕಾಗಿ, ದಿನ ಬಿಟ್ಟು ದಿನ ಅವರು ಪತ್ರಿಕೆಗಳಿಗೆ ಸುದ್ದಿಗಳನ್ನು ತಿಳಿಸುವೆವೆಯಾಗಿಯೂ ಏರ್ಪಡಿಸಿರುವುದು, ಅವರು ಪತ್ರಿಕೆಗಳ ಸಹಾಯವನ್ನು ಎಷ್ಟು ಮಟ್ಟಿಗೆ ಹಾರ್ದಿಸಿಕೊಂಡಿರುವರೆಂಬುದಕ್ಕೂ ಒಂದು ಪ್ರತ್ಯಕ್ಷ ನಿದರ್ಶನವಾಗಿದೆ.

ಸರ್ ಕ್ರಿಪ್ಸ್‌ರು ಭಾರತದ ಯಾವತ್ತು ಪ್ರಾಂತಿಕ ಪ್ರಧಾನರನ್ನೂ, ಹಿಂದಿನ ಅವುಗಳ ಪ್ರಧಾನರನ್ನೂ ಕಾಣುವರು. ಗಾಂಧಿಜಿಯವರ ಮಟ್ಟಿಗೆ ಅವರು ಕಾಂಗ್ರೆಸಿನ ಶಿಷ್ಠ ಮಂಡಲದಲ್ಲಿ ಒಬ್ಬರಾಗುವರೆಂದು ಸರ್ ಕ್ರಿಪ್ಸ್‌ರು ತಿಳಿದು, ಈಗ ಗಾಂಧಿಜಿಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾತ್ರವಲ್ಲ, ಕಾಂಗ್ರೆಸಿನ ಪೂರ್ಣ ಸದಸ್ಯರೂ ಅಲ್ಲವೆಂದು ತಿಳಿದು, ಮುಂದೆ ಗಾಂಧಿಜಿಯವರು ಕಾಣಲೇ ಬೇಕೆಂಬ ಆಸೆಯನ್ನು ಸರ್ ಕ್ರಿಪ್ಸ್‌ರದು. "ನಾನು ಗಾಂಧಿಜಿಯವರನ್ನು ಕಾಣಲೇ ಬೇಕು. ಅವರು ಭಾರತದ ಹಲವು ಮುಖಂಡರನ್ನು ಕಾಣುವ ಆಲೋಚನೆಯಿರಬಹುದು. ಸರ್ ಕ್ರಿಪ್ಸ್ ಪತ್ರಿಕಾ ಪ್ರತಿನಿಧಿಗಳ ಹಲವು ಪ್ರಶ್ನೆಗೆ ಉತ್ತರ ಹೇಳಿದರು. ತಮ್ಮ ಪ್ರಕಟಣೆಗಳಿಗೆ ಅನುಸಾರವಾಗಿಯೇ ಸರಕಾರದ ಸೂಚನೆಗಳೂ ಇರುವವೆಂದರು. "ಮಿ. ಅಮರಿಯವರೇಕೆ ನಿಮ್ಮೊಡನೆ ಬರಲಿಲ್ಲ?" ಎಂಬ ಪ್ರಶ್ನೆಗೆ "ಬ್ರಿಟಿನಿನ ಮನುಷ್ಯಬಲ ಅಷ್ಟೇನೂ ಹೆಚ್ಚಲ್ಲ" ಎಂಬ ಸ್ವಾರಸ್ಯವಾದ ಉತ್ತರ ಕೊಟ್ಟರು. ತನ್ನ ಕಾರ್ಯನಿರ್ವಾಹಕ್ಕೆ ಅಧಿಕಾರಗಳ ತೊಂದರೆಗಳೇನೂ ಇಲ್ಲ; ಬ್ರಿಟಿಶ್ ಮಂತ್ರಿಮಂಡಲದ ಸೂಚನೆಗಳನ್ನು ಭಾರತವು ಸ್ವೀಕರಿಸುವುದೊಳ್ಳೆದು; ಎಂಥ ಅಡ್ಡಿ ಆಡಚಣೆಗಳಿದ್ದರೂ ಇಂಡಿಯವು ಅದನ್ನು ದಾಟಲು ಈಗ ಯತ್ನಿಸಬೇಕು ಎಂದು ಕ್ರಿಪ್ಸ್‌ರಾಡಿದರು. ತಾವು ಭಾರತದಲ್ಲಿ ಎರಡು ವಾರಗಳಿರುವೆನೆಂದರು. "ಯುದ್ಧ ಮಂತ್ರಿಮಂಡಲದಲ್ಲಿ ದೊಡ್ಡ ಬದಲಾವಣೆಗಳನ್ನು ಮಾಡಲಾಗುವುದಿಲ್ಲ; ಆದರೆ ಸಣ್ಣ ಪುಟ್ಟ ಅಂಶಗಳನ್ನು ಹೊಂದಿಸಿಕೊಳ್ಳಬಹುದು" ಎಂದವರಾಡಿದರು. ಒಟ್ಟಿನಲ್ಲಿ ಇನ್ನೂ ಸಮಯ ಕಳೆಯುವುದಕ್ಕಿಲ್ಲ; ಭಾರತದ ಮುಂದಾಳುಗಳು ಶೀಘ್ರ ನಿರ್ಣಯವನ್ನು ಮಾಡಬೇಕೆಂದು ಸರ್ ಕ್ರಿಪ್ಸ್‌ರು ವಿನಂತಿಸಿಕೊಂಡುದಲ್ಲದೆ, ಬ್ರಿಟಿಷ್ ಮಂತ್ರಿಮಂಡಲದ ಯೋಜನೆಗಳು ಏನಿವೆಯೋ ಅವು ಯಶಸ್ವಿಯಾಗಿ ಅಂಗೀಕರಿಸಲ್ಪಡಬಹುದೆಂದೂ ಅವರು ಧೈರ್ಯ ಸೂಚಿಸಿದರು.

ನಾನಾ ರಣರಂಗಗಳ ವಾರ್ತೆ

ಜಪಾನೀಯರು ಅತ್ಯಂತ ಉಗ್ರವಾದ ರೀತಿಯಲ್ಲಿ ಪೋರ್ಟ್‌ಬಿ ಬಂದರದಲ್ಲಿ ವಿಮಾನದಾಳಿ ನಡೆಸಿದರು; ಇದು ವರೆಗೆ ಅಲ್ಲಿ ನಡೆದ ಜಪಾನೀಯರ ವಿಮಾನ ದಾಳಿಯಲ್ಲಿ ಇದೇ ಭೀಕರ ಸ್ವರೂಪದ್ದು. ಹಾಗೇ ಜಪಾನೀಯರು ವೈಂಡನ್ ಹ್ಯಾಮಿನ ಮೇಲೂ ಬಾಂಬು ಹಾಕಿದರು;—ರಷ್ಯದ ರಣರಂಗದಲ್ಲಿ ಅವರು ಬ್ರಿಯಾನಸ್ಕಿನ ಬಾಗಿಲಲ್ಲಿ ಇರುವರೆಂದೂ, ಮಧ್ಯ ರಂಗದಲ್ಲಿಯೂ ಅವರು ವಿಜಯಿಗಳಾಗಿ ಮುಂದೊತ್ತುತ್ತಿರುವರೆಂದೂ ತಿಳಿದುಬಂದಿದೆ;—ಜಪಾನೀಯರ ಒಟ್ಟಿಗೆ ೧೪ ಸಾವಿರ ಟನ್ ಭಾರದ ೩ ಹಡಗುಗಳನ್ನು ಅಮೆರಿಕದ ಸಬ್‌ಮೆರೈನ್‌ಗಳು ಮುಳುಗಿಸಿದುವು;—ಜರ್ಮನರು ಬ್ರಿಟನಿನ ದಕ್ಷಿಣ ಪೂರ್ವ ಕರಾವಳಿಯಲ್ಲಿ ಬಾಂಬು ಹಾಕಿದರು;—ಬರ್ಮದಲ್ಲಿ ಜಪಾನರು ಹೊಸ ಸೇನೆಗಳನ್ನು ತಂದಿಳಿಸಿ, ಮಿಂಗಲ್‌ಡನಿನ ಮೇಲೆ ಬಾಂಬು ಸುರಿಸಿದ್ದಾರೆ; ಪೂ ಅನೇಕ ಸಲ ಕೈ ಬದಲಾಯಿಸಿತು; ಈರಾವತಿ ರಂಗದಲ್ಲಿ ದೊಡ್ಡ ಯುದ್ಧಕ್ಕೆ ಜಪಾನರು ಸಿದ್ಧರಾಗುತ್ತಿದ್ದಾರೆ.

ಸೆಕ್ಯುರಿಟಿ ಕೈದಿಗಳಿಗಾಗಿ ವಿಚಾರಣಾ ಸಮಿತಿ

ಬಂಗಾಳದಲ್ಲಿನ ಸೆಕ್ಯುರಿಟಿ ಕೈದಿಗಳ ಬಿಡುಗಡೆಯ ಕುರಿತು ತನಿಖೆ ಮಾಡಲು ಅಲ್ಲೊಂದು ವಿಚಾರಣಾ ಸಮಿತಿಯ ನೇಮಕವಾಗಲಿದೆ.

ಫಿಲಿಪ್ಪೈನ್ಸ್‌ಗಳ ರಕ್ಷಣೆ

ಅಮೆರಿಕದವರು ಫಿಲಿಪ್ಪೈನ್ಸ್‌ಗಳ ರಕ್ಷಣೆಗಾಗಿ ಕೊನೆತನಕವೂ ಕಾದಾಡುವರು; ಜವಾನರು ಬಹಳ ನಷ್ಟಪಡಲು ಸಿದ್ಧರಾಗಿದ್ದರೆ ಬಾಟನ್ ಮತ್ತು ಕೊರಗಿಡೋರನ್ನು ಅವರು ಆಕ್ರಮಿಸಲೂ ಬಹುದೆಂದು ಫಿಲಿಪ್ಪೈನ್ಸ್‌ಗಳ ಮಾಜಿ ಕಮಿಶನರ್ ಮಿ. ಫ್ರಾನ್ಸಿಸ್ ಸಾಯರ್‌ರವರು ತಿಳಿಸುತ್ತಾರೆ.

ರಾಜದ್ರೋಹಿಗಳಿಗೆ ದಂಡನೆ

ವಿಚಿ ಸರಕಾರವು ತನ್ನ ಒಂದು ಮಿಲಿಟರಿ ಕೋರ್ಟಿನ ಮೂಲಕ ೭೦ ಮಂದಿ ರಾಜದ್ರೋಹಿಗಳೆಂಬವರ ವಿಚಾರಣೆ ನಡೆಸಿ ಅವರಲ್ಲಿ ೩೬ ಮಂದಿಗೆ ಮರಣ ದಂಡನೆಯನ್ನೂ, ಇತರರಿಗೆ ನಾನಾ ಅವಧಿಯ ಶಿಕ್ಷೆಯನ್ನೂ ವಿಧಿಸಿ ಅವರ ಯಾವತ್ತು ಭೂಮಿ ಕಾಣಿಗಳನ್ನೂ ಸರಕಾರಕ್ಕೆ ಸೇರಿಸಿಕೊಂಡಿದೆ. ಜಿಬ್ರಾಲ್ಟರಿನಲ್ಲಿ ಬ್ರಿಟಿಕರಿಗೆ ಮಣಿಯಲಿದ್ದ ಇಬ್ಬರು ಫ್ರೆಂಚ್ ನೌಕಾ ಮಂದಿಯನ್ನು ವಿಚಿ ಸರಕಾರವಾಗಲೇ ವಧಿಸಿದೆ.

ಮದ್ರಾಸ್ ಗವರ್ನರರು ದಯೆ ತೋರಿದರು

ಉತ್ತರ ಮಲಬಾರಿನ ದಂಗೆಯಲ್ಲಿ ಒಬ್ಬ ಆರೋಪಿಯಾಗಿದ್ದು ಸೆಶನ್ಸ್ ಕೋರ್ಟಿನಲ್ಲಿ ೭ ವರ್ಷ ಕಠಿನ ಸಜೆಗೂ ಅನಂತರ ಹೈ ಕೋರ್ಟಿನಲ್ಲಿ ಮರಣ ದಂಡನೆಗೂ ಗುರಿಯಾದ ಕೆ. ಪಿ. ಆರ್. ಗೋಪಾಲನ್ ನಂಬಿಯಾರರ ವಿಚಾರದಲ್ಲಿ ಮಾಡಿಕೊಂಡ ಅರ್ಜಿಯನ್ನು ಮನ್ನಿಸಿ, ಮದ್ರಾಸಿನ ಮಾನ್ಯ ಗವರ್ನರರು ಮರಣದಂಡನೆಯನ್ನು ಟಾಪು ಸಜೆಗೆ ಇಳಿಸುವ ಕೃಪೆ ಮಾಡಿರುವರು.

ನೋಟೀಸು

ದ. ಕ. ಜಿಲ್ಲಾ ಮಂಗಳೂರು ಡಿ। ಮು। ಕೋರ್ಟಿನಲ್ಲಿ.

O. S. 19/42.

ವೈ. ಗೋಪಾಲಕೃಷ್ಣ ಭಟ್ಟ — **ವಾದಿ.**

ಮತ್ತು

ಎ. ಜೆ. ಡಿ. ಸೋಜ—**ಪ್ರತಿವಾದಿ.**

ಪ್ರತಿವಾದಿ ಎ. ಜೆ. ಡಿ. ಸೋಜ—ಎ. ಎಮ್. ಡಿ. ಸೋಜರ ಮಗ, ಉಪಾಧ್ಯಾಯ ವೃತ್ತಿ—ಮಂಗಳೂರು ತಾಲೂಕು ಪೆರ್ಮುದೆ ಗ್ರಾಮದಲ್ಲಿದ್ದವರು. ಇವರಿಗೆ ಈ ಮೂಲಕ ಕೂಡಾ ತಿಳಿಸುವ ದೇನಂದರೆ:—

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಆಡವಿನ ಹಣದ ಬಡ್ಡಿ ಬಾಕಿ ವಗೈರೆಯನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲಿನ ನಂಬ್ರದ ವ್ಯಾಜ್ಯವು ಮೇಲ್ಕಂಡ ಕೋರ್ಟಿನಲ್ಲಿ ತಾ. 31-3-1942ಕ್ಕೆ ತನಿಖೆಗೆ ಇಡಲ್ಪಟ್ಟಿದೆ. ಆ ದಿನ ಹಗಲು 10½ ಗಂಟೆಗೆ ನೀವು ಖುದ್ದಾಗಿಯಾಗಲೀ ಯಾ ಕ್ರಮ ಪ್ರಕಾರ ಅಧಿಕಾರ ಹೊಂದಿದ ಪ್ಲೀಡರ್ ಮೂಲಕವಾಗಿಯಾಗಲೀ ಸದರಿ ಕೋರ್ಟು ಮುಂದೆ ಹಾಜರಾಗಿ ಉದ ಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರ ಹಾಜರಿಯಲ್ಲಿಯೇ ಸದರಿ ದಾವೆಯು ತೀರ್ಮಾನಿಸಲ್ಪಡುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗಿದೆ.

D. Mohan Rao,
ವಾದಿ ಪರ ಎಡ್ವೊಕೇಟ್.

ಮಂಗಳೂರು, ತಾ-22-3-1942.

ಜೈನ ಸಮಾಜ ವಿಚ

ಕ್ಷ
ಧರ್ಮ
ಹೆಗ್ಗಡೆ
ಮಾತ್ರ ಕ್ಷ
ವಿಮಲಕು
ದೊಡ್ಡ
ರಘುಚಂದ್ರ
ಮೆಂಬರ್
ವಾಸ ಬಳ
ಮಹೋತ್ಸವ ಅತ್ಯಂತ ವೈಭವ
ನಡೆಯಿತು. ಜಿಲ್ಲೆಯ ಹಲವು
ಯಿಂದ ಜೈನ ಸಮಾಜದ
ಇತರ ಸಮಾಜಗಳ ಆಢ್ಯರ
ಮಹಿಳೆಯರೂ ಇದಕ್ಕೆ ದಯ
ಲಗ್ನ ಸಮಾರಂಭವನ್ನು ಕಂಡ್ತು
ವನ್ನು ಸ್ವೀಕರಿಸಿ ಸಂತೊ
ಶ್ರೀ ಪಲಿಮಾರು ಶ್ರೀ
ವಧೂವರರಿಗೆ ಆಶೀರ್ವಾ
ವಾಗಿ ಉಡುಗೊರೆಗಳನ್ನು ಕ
ಹಿಸಿದ್ದರು. ಈ ಲಗ್ನ
ಮಂದಿ ಉಡುಗೆ
ಅರ್ಪಿಸಿದರು. ಈ
ಮೈಸೂರು ಆಸ್ಥಾನ
ಶ್ರೀ। ದೇವೇಂದ್ರಪ್ಪನವ
ಜಿಲ್ಲೆಯ ಫಿಡ್ಲ್ ಎದ್ರಾ
ಕೃಷ್ಣರಾವ್, ಶ್ರೀ
ಉಪಾಧ್ಯಾಯ, ಶ್ರೀವಾಂಚಿ
ಬಾಯಿ ಮೊದಲಾದವರ
ಕಛೇರಿಯೂ, ಜಿಲ್ಲೆಯ ಪ್ರಸಿದ್ಧ
ಗಾರರ ಮೇಳಗಳ ನಾಗಸ್ವ
ಮಹೋತ್ಸವದ ಕಳೆಯೇರಿಸಿ
ಕಳೆದ ಮಂಗಳವಾರ ರಾತ್ರಿ ಶ್ರೀ।
ಬಲಿಪ ಭಾಗವತರು, ಮೈಂದಪ್ಪ ರೈ,
ನಾರಾಯಣ ಕಿಲ್ಲೆ, ವೆಂಕಪ್ಪ ಸೆಟ್ಟು,
ಶಂಕರನಾರಾಯಣ ಶಾಸ್ತ್ರಿ, ರಾಮ
ಕೃಷ್ಣರಾವ್ ಇವರೇ ಮೊದಲಾದವ
ರಿಂದ "ಶ್ರೀ ಸುಭದ್ರಾ ಕಲ್ಯಾಣ"ವೆಂಬ
ಯಕ್ಷಗಾನ ಸಮಾರಂಭವೂ ಜರುಗಿತು.

ಸರ್ ಸಿಕಂದರ್—ಮೌಲಾನಾ ಅಜಾದರ ಭೇಟಿ

ಪಂಜಾಬ್ ಪ್ರಧಾನರು ಲಾಹೋರಿನಲ್ಲಿ ರಾಷ್ಟ್ರಪತಿಗಳನ್ನು ಕಂಡು ಮಾತಾಡಿದರು. ರಾಜಕೀಯ ಸಮಸ್ಯೆಗಳ ಕುರಿತಾಗಿ ನಡೆದ ಈ ಸಂಭಾಷಣೆಯ ಪರಿಣಾಮವು ಬೇಗನೇ ಪ್ರಕಟವಾಗಬಹುದು.

ಇತರ ಸುದ್ದಿಗಳು

ನ್ಯೂಗಿನಿಯಲ್ಲಿ ಮಿತ್ರರ ಪ್ರತಿಭಟನೆಯಿಂದ ಜಪಾನರ ಮುನ್ನಡೆ ನಿಧಾನವಾಗಿದೆ; ಅಟ್ಲಾಂಟಿಕ್ ಕ್ಷೇತ್ರದಲ್ಲಿ ಅಮೆರಿಕದ ೩ ಹಡಗುಗಳು "ಟಾರ್ಪಿಡೋ" ಆದುವು; ಲೀಬಿಯದ ಟೆಮಿಮಿನಲ್ಲೆ ಬ್ರಿಟಿಶರು ಬಾಂಬು ಸುರಿಸಿ ಹಲವು ಮಂದಿ ಶತ್ರು ಸೈನಿಕರನ್ನು ಹಿಡಿದಿದ್ದಾರೆ.

ಶತ್ರುಗಳ ಹಡಗುಗಳು ಮುಳುಗಿಸಲ್ಪಟ್ಟುವು

ಮೆಡಿಟರೇನಿಯನ್ ಕ್ಷೇತ್ರದಲ್ಲಿ ಮಿತ್ರರು ಏಕ್ಸಿಸಿನ ಕೆಲವು ಯುಬೋಟ್, ಹಡಗು ಮುಂತಾದುವನ್ನು ಮುಳುಗಿಸಿ ಹೇಳಲಾಗಿದೆ. ಇವು ಒಟ್ಟಿಗೆ

ಶ್ರೀ ಧನಲಕ್ಷ್ಮಿ ಸ್ನಫ್ ವರ್ಕ್ಸ್,
(ಪ್ರೊ:—ಕೆ. ಶಿವಪ್ಪ ಬಂಗೇರ)
ಮಾರ್ಕೆಟ್ ರೋಡು, ಮಂಗಳೂರು.
ಇಲ್ಲಿ ಒಳ್ಳೆ ಉತ್ತಮ ನಶ್ಯತಯಾರಿಸಲ್ಪಡುತ್ತದೆ.
ಒಮ್ಮೆ ಬಂದು ಪರೀಕ್ಷಿಸಿರಿ.

ಸ್ಕೌಟ್
ಾದಾಪುರ

ಹಿಂದು
ಯೇಶನಿನ
ಎಪ್ರಿಲ್
ಆಣೆಗುಡ್ಡೆ
ನಾಯಕ
ಶಿಬಿರವೊಂ
ಾಗಿದೆ. ತರ
ನಡೆಸಲು
ಬಗ್ಗೆ ಪ್ರಾಂತೀಯ ಸಹಾಯಕ
ನರರಾದ ಶ್ರೀ. ಎಂ. ರಾಜಗೋ
ಇವರು ಬರುವವರಿದ್ದಾರೆ.
ಲ್ಲಿ ಭಾಗ ವಹಿಸಲಿಚ್ಛಿಸುವ
ರಿಗೆ ಆ ದಿನಗಳನ್ನು ಡ್ಯೂಟಿ
ಪರಿಗಣಿಸುವರೆಂತೆ, ಸಂಬಂಧ
ಕಾರಿಗಳನ್ನು ಕೇಳಿಕೊಳ್ಳ
ವರಿಂದ ಬರುವ ಹುಕು
ಾಯಿಸಲ್ಪಟ್ಟ ಉಮೇದ್ವಾರ
ದಿನಿಂದ ತಿಳಿಸಲಾಗುವುದು.
ಸುವ ಪ್ರತಿಯೊ
ಶಿಬಿರ ಶುಲ್ಕವನ್ನು
ತೆರಬೇಕಾಗುವುದು.
ಸೇರಲಿಚ್ಛಿಸುವವರು,
ತಾರೀಕಿನೊಳಗೆ
ಅರ್ಜಿಗಳನ್ನು ಕಳು
ಯೂ, ಇಡೀ
ಮುಖ್ಯತಃ ಕುಂದಾಪುರ ತಾಲೂ
ಪಕರು ಹೆಚ್ಚಿನ ಸಂಖ್ಯೆಯಿಂದ
ಲ್ಲಿ ಭಾಗವಹಿಸಿ ಈ ಸುಸಂ
ಸುಪಯೋಗಪಡಿಸಿಕೊಳ್ಳೆ
ಯೂ ವಿನಂತಿ ಎಂದು ಶ್ರೀ.
ಟೀಲು ಗಣಪತಿ ಶರ್ಮಾ, ಗಾ
ರ್ಯದರ್ಶಿ ಹಿಂದುಸ್ಥಾನ ಸ್ಕೌಟು
ಸೋಸಿಯೇಶನ್, ಕುಂದಾಪುರ ಮತ್ತು
ಂ. ಎಸ್. ಮಾಧವರಾವ್, ಜಿಲ್ಲಾ
ಸ್ಕೌಟು ಕಮಿಶನರ್ ಇವರು ತಿಳಿಸು
ತ್ತಾರೆ.

ಗುಂಡ್ಮಿ

ಈ ಗ್ರಾಮದ ಪ್ರಾಥಮಿಕ
ಸ್ಕೂಲ್‌ಶಾಲೆಯಲ್ಲಿ ಹೆತ್ತವರ ಕೂಟದ
ಸಭೆಯು ಶ್ರೀ। ಟಿ. ಶೀನಪ್ಪ ಹೆಗ್ಗಡೆ,
ವಿದ್ವಾನ್, ಬಿ. ಓ. ಎಲ್., ಎಲ್. ಟಿ,
ಜೂನಿಯರ್ ಡಿ। ಇನ್ಸ್‌ಪೆಕ್ಟರರು,
ಉಡುಪಿ ರೇಂಜ್-ಇವರ ಅಧ್ಯಕ್ಷತೆ
ಯಲ್ಲಿ ಈಚಿಗೆ ತಾ. ೨೧-೩-೪೨ ಶನಿವಾರ
ಜರಗಿತು. ಕಾರ್ಯಕ್ರಮಗಳೆಲ್ಲಾ
ಮುಗಿದು ಅಧ್ಯಕ್ಷರ ಭಾಷಣವಾದ
ಮೇಲೆ, ತೊರವೆ ರಾಮಾಯಣ
ದೊಳಗಿನ "ತಾರಾ ಪ್ರಲಾಪ"ವೆಂಬ
ಅಧ್ಯಾಯವನ್ನು ಶ್ರೀ। ಪಾಂ. ಕಾಡಪ್ಪ
ವಿದ್ವಾನ್ ಇವರು ಓದಿದರು. ಮಾನ್ಯ
ಅಧ್ಯಕ್ಷರು ಕೆಲವು ಪದ್ಯಗಳಿಗೆ ಅರ್ಥ
ವನ್ನು ಹೇಳಿದ ಮೇಲೆ, ಶ್ರೀ। ಐ. ಯಜ್ಞ
ನಾರಾಯಣ ಉಡುಪ ವಿದ್ವಾನ್,
ಇವರು ಉಳಿದ ಭಾಗದ ಅರ್ಥವನ್ನು
ಹೇಳಿ ಸಂಪೂರ್ಣಗೊಳಿಸಿದರು. ಧನ್ಯ
ವಾದಗಳೊಂದಿಗೆ ಸಭೆ ಮುಕ್ತಾಯ
ವಾಯಿ

ಪಾಂಡೇಶ್ವರ

ತಾ. ೨೫-೪-೪೨ನೇ ಶನಿವಾರ,
ಈ ಗ್ರಾಮದಲ್ಲಿ ಯಕ್ಷಗಾನದ ಪರಿಷ
ತ್ತೊಂದು ನೆರವೇರಬೇಕೆಂದು ನಿರ್ಣಯ
ವಾಗಿದೆ. ಅಂದು ಮಹಾಕವಿ ರನ್ನನ ಗದಾ
ಯುದ್ಧದ ವಾಚನ ಮತ್ತು ಅರ್ಥವಿವರ
ಣೆಯು ಶ್ರೀ॥ ವಿದ್ವಾನ್ ಪಾಂ. ಕಾಡಪ್ಪ
ಮತ್ತು ವಿದ್ವಾನ್ ಐರೋಡಿ ಯಜ್ಞ
ನಾರಾಯಣ ಉಡುಪರಿಂದ ಮಾಡಲ್ಪಡು
ವುದು. ಹೊಸ ಪ್ರಸಂಗವಾದ "ಭೀಮ
ಪ್ರತಾಪ"ದ ತಾಳ ಮದ್ದಳೆಯೂ ಪ್ರಸಿದ್ಧ
ಅರ್ಥಗಾರರಿಂದ ನಡೆಸಲ್ಪಡುವುದು.
ಅಲ್ಲದೆ, ಯಕ್ಷಗಾನದ ಕುರಿತಾಗಿ ಅನು
ಭವಸ್ಥರಿಂದ ಕೆಲವು ಉಪನ್ಯಾಸಗಳನ್ನು
ಕೊಡಿಸುವ ಏರ್ಪಾಡೂ ಮಾಡಲಾಗಿದೆ.
ಯಕ್ಷಗಾನಾಭಿಮಾನಿಗಳೆಲ್ಲಾ ಆ ದಿನದ
ಸಭೆಯ ಕಾರ್ಯಕ್ರಮಗಳನ್ನು ಪ್ರೋತ್ಸಾ
ಹಿಸ ಬೇಕಾಗಿ ವಿನಂತಿ.

ಕೊನೆಯಬ್ಬು

ಸರ್ ಎಸ್. ಕ್ರಿಪ್ಸ್‌ರವರು ರಾಷ್ಟ್ರಪತಿ
ಮೌಲಾನರು, ಶ್ರೀ। ಕೇಳ್ಕರರು, ಮಿ।
ಜಿನ್ನರು ಇವರೊಡನೆ ಮಾತಾಡಿದರು;
ಇಂದು ನಾಳೆಯಲ್ಲಿಯೇ ಮಹಾತ್ಮ
ರೊಡನೆ ಮಾತಾಡುವ ಸಂಭವವಿದೆ;—
ಜಪಾನರು ಟಂಗೂವನ್ನು ವಶಮಾಡಿ
ಕೊಂಡಿರುವುದಾಗಿ ಹಕ್ಕು ಸ್ಥಾಪಿಸು
ತ್ತಿರುವುದಾದರೂ, ಆ ವಾರ್ತೆ ಇಂಗ್ಲೆಂ

ಕೌನ್ಸಿಲ್ ಆಫ್ ಸ್ಟೇಟನಲ್ಲಿ

ಅಧಿಕ ಆದಾಯದ ಮೇಲೆ ತೆರಿಗೆ
ಹೆಚ್ಚಿಸುವ, ಪಟ್ಟಣ ನಗರಗಳಿಂದ
ಒಕ್ಕಲು ತೆಗೆಯುವವರಿಗೆ ಹೆಚ್ಚಿನ
ಸಹಾಯಮಾಡುವ, ಸೇನೆಯಲ್ಲಿ ಹಿಂದೀ
ಯರಿಗೆ ತಕ್ಕ ಸ್ಥಾನಮಾನಗಳನ್ನು
ಹೆಚ್ಚಾಗಿ ಕಲ್ಪಿಸುವ ಕುರಿತಾಗಿ ಈ
ಶಾಸನಸಭೆಯಲ್ಲಿ ಸೂಚನೆಗಳು ಬಂದಿವೆ.

ಡಿನವರು "ಆಧಾರವಿಲ್ಲದು
ಅಲ್ಲಗಳೆಯುತ್ತಾರೆ;— ಮೊ
ಜಪಾನರು ತಿರುಗಿ ಬ
ದರು;—ಬರ್ಮಾನಿನಲ್ಲಿ
ನಡೆಯುತ್ತಿದೆ;—ಸ್ಟಾ
ಯಾಳಿ ನಿತ್ಯ
ಭೂಮಿ" ಇನ್ನು
ಮದ್ರಾಸ್ ಸರ
ಹೊರಡಿಸಿದೆ;—ರಷ್ಯ
ರಂಗಗಳಲ್ಲಿಯೂ
ದ್ದಾರೆ.

ಎಲ್ಲ—ರಣ
ನುಗ್ಗುತ್ತಿ

ಜಪಾನರ ಮನುಷ್ಯ ಬಲದ ನಷ್ಟ

ಪೆಸಿಫಿಕ್ ರಣರಂಗದಲ್ಲಿ ಜಪಾನರ
ಮನುಷ್ಯ ಬಲದ ನಷ್ಟ ಸುಮಾರು
೧೪೦೦೦೦ ಮಂದಿ ಎಂದು ಅವರಲ್ಲಿ
ಮೂರರಲ್ಲಿ ಒಂದು ಪಾಲು ನೀರಿನಲ್ಲಿ
ಮುಳುಗಿ ಸತ್ತರೆಂದೂ ತಿಳಿದು ಬಂದಿದೆ.
ಜಪಾನಿನ ಒಟ್ಟು ಸೇನಾ ಬಲವು ಸುಮಾ
ರು ೨೦ ಲಕ್ಷವೆಂದು ಅಂದಾಜಾಗಿದೆ.

ಶಾಂತಿದಳ

ಸ್ವಯಂಸೇವಕರಾಗಿ ಸೇರಿರಿ

ಜಿಲ್ಲೆಯ ಮಹಾಜನರಲ್ಲಿ ವಿನಂತಿ

ಜಿಲ್ಲೆಯೊಳಗಿನ ಎಲ್ಲ ಸರ್ಕಲುಗಳಲ್ಲಿ ಕೊಂಗ್ರೆಸ್ ವತಿಯಿಂದ ಸ್ವಯಂಸೇವಕ ದಲಗಳನ್ನು ರಚಿಸುವುದೆಂದು ನಿರ್ಧಾರವಾಗಿರುತ್ತದೆ. ೧೮ ವರ್ಷ ಪ್ರಾಯಕ್ಕೆ ಮಿಕ್ಕಿದ ಮತ್ತು ದಲದ ಪ್ರತಿಜ್ಞೆಗೆ ಸಹಿ ಮಾಡುವ ಎಲ್ಲ ಸ್ತ್ರೀ ಪುರುಷರು ಈ ದಲದ ಸದಸ್ಯರಾಗಬಹುದು. ಇವರು ಕೊಂಗ್ರೆಸ್ ಸದಸ್ಯರಿರಬೇಕು ಅಥವಾ ಖಾದಿ ಧಾರಿಗಳಿರಬೇಕು ಎಂಬ ನಿರ್ಬಂಧವಿಲ್ಲ. ಆದರೆ, ಈ ದಲದಲ್ಲಿ ಕೆಲಸ ಮಾಡುವಾಗ ಮಾತ್ರ ಅಹಿಂಸಾತತ್ವದಿಂದಲೇ ನಡಿಯಬೇಕು. ದಲದ ಕರ್ತವ್ಯಗಳು ಈ ಕೆಳಗಿನಂತೆ ಇವೆ:—

೧. ಜನತೆಯೊಡನೆ ಸಂಬಂಧವನ್ನು ಶಕ್ಯವಿದ್ದಷ್ಟು ಹೆಚ್ಚು ಬೆಳೆಸಬೇಕು. ೨. ವಿಮಾನದಾಳಿಯ ಕಾಲಕ್ಕೆ ಜನರು ಹೇಗೆ ವರ್ತಿಸಬೇಕು ಎಂಬುದರ ಬಗ್ಗೆ ಶಿಕ್ಷಣಕೊಡುವುದು, ಮತ್ತು ಆ ಕಾಲದಲ್ಲಿ ಮಾರ್ಗದರ್ಶನ ಮಾಡುವುದು. ೩. ದಾಳಿಯ ನಂತರ ಜನರ ಪ್ರಾಣವಿತ್ತಗಳ ಸಂರಕ್ಷಣೆಗಾಗಿ ಅವಶ್ಯವಾದ ಪ್ರಥಮೋಪಚಾರ ಮೊಂತಾದ ಕಾರ್ಯಗಳನ್ನು ಮಾಡುವುದು. ೪. ಗಾಬರಿಗೊಳಿಸುವ ಸುಳ್ಳು ಸುದ್ದಿಗಳನ್ನು ಪ್ರತೀಕರಿಸಿ ಜನರಿಗೆ ನಿಜ ಸ್ಥಿತಿಯನ್ನು ತಿಳಿಸುವುದು. ೫. ಜನತೆಗೆ ವೈಯಕ್ತಿಕ ಹಾಗೂ ಸಾಮಾಜಿಕ ರಕ್ಷಣೆಯ ಯೋಗ್ಯ ಅರಿವನ್ನುಂಟುಮಾಡುವ ಮತ್ತು ಸಂಕಟ ಸಮಯದಲ್ಲಿ ಗಾಬರಿಗೊಳ್ಳದೆ ಶಾಂತತೆಯಿಂದಲೂ, ಧೈರ್ಯದಿಂದಲೂ ಪ್ರಸಂಗವನ್ನೆದುರಿಸುವುದಕ್ಕೆ ಬೇಕಾದ ಶಿಕ್ಷಣವನ್ನು ಕೊಡುವುದು. ೬. ಜನತೆಗೆ ಬೇಕಾದ ಆಹಾರಸಾಮಗ್ರಿಗಳ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಪೂರೈಕೆಯ ಬಗ್ಗೆ ಹೆಚ್ಚಿನ ಜಾಗ್ರತೆ ಕೊಡುವುದು. ಆಹಾರಕ್ಕೆ ಬೇಕಾಗುವ ಧಾನ್ಯಗಳನ್ನು ಬೆಳೆಸಲು ಜನತೆಗೆ ಉತ್ತೇಜನ ಕೊಡುವುದು. ೭. ದಂಗೆ, ಕಳವು, ಸುಲಿಗೆ ಮುಂತಾದುವು ಆಗದಂತೆ ಮುಂಜಾಗ್ರತೆಯ ಉಪಾಯಗಳನ್ನು ಕೈಕೊಳ್ಳುವುದು. ೮. ಗ್ರಾಮೋದ್ಯೋಗಗಳನ್ನು ಬೆಳೆಸಿ ಜನರಿಗೆ ಹೆಚ್ಚಿಗೆ ಸ್ವಾವಲಂಬಿಯಾಗುವ ಶಿಕ್ಷಣ ಕೊಡುವುದು. ೯. ಸದ್ಯದ ಯುದ್ಧವನ್ನನುಲಕ್ಷಿಸಿ ಅವಶ್ಯವೆನಿಸುವ ಎಲ್ಲ ಶಕ್ಯವಿದ್ದ ಮುಂಜಾಗ್ರತೆಯನ್ನೂ (Precautions) ಮತ್ತು ಪರಿಹಾರಕಾರ್ಯಗಳನ್ನೂ (Relief Measures) ಕೈಕೊಳ್ಳುವುದು. ಸದ್ರಿ ಯುದ್ಧ ಪರಿಸ್ಥಿತಿಯ ಮೂಲಕ ತಮ್ಮ ವಾಸಸ್ಥಳಗಳನ್ನು ಬಿಟ್ಟು ಬಂದವರಿಗೂ, ಹೋಗುವವರಿಗೂ ಶಕ್ಯವಿದ್ದ ಸಹಾಯ ಮಾಡುವುದು.

ಸ್ವಯಂಸೇವಕರಾಗಲಿಚ್ಛಿಸುವವರು ಜಿಲ್ಲಾ ಕೊಂಗ್ರೆಸ್ ಕಮಿಟಿಗೆ ಬರೆದು ತಿಳಿಸಬಹುದು.

ಕುಡ್ಪಿ ವಾಸುದೇವ ಶೆಣೈ,
ಪ್ರಧಾನ ಕಾರ್ಯದರ್ಶಿ,
ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ

O. P. 25/1942.

ಮ್ಯಾನರ್ ನಾರಾಯಣ ಇವನ ಬಾಬಿನಲ್ಲಿ

ಅದಿತಿ ಅಮ್ಮ–ಪದ್ಮನಾಭ ಭಟ್ಟರ ವಿಧವೆ, ಪುತ್ತೂರು ತಾಲೂಕು ಇಳಂತಿಲ ಗ್ರಾಮದಲ್ಲಿರುವವಳು— **ಅರ್ಜಿದಾರಳು**

ಮತ್ತು

1. ಲಕ್ಷ್ಮಿ ಅಮ್ಮ ನಾರಾಯಣ ಭಟ್ಟರ ವಿಧವೆ, 2. ಶಂಕರ ಭಟ್ಟ,–1ನೇಯವಳ ಮಗ, ಪುತ್ತೂರು ತಾಲೂಕು ಬಲ್ನಾಡು ಗ್ರಾಮದಲ್ಲಿರುವವರು—

ರೆಸ್ಪೊಂಡೆಂಟರು

ಮೇಲ್ಕಂಡ ಮ್ಯಾನರ್ ನಾರಾಯಣಗೆ ತನ್ನನ್ನು ಗಾರ್ಡಿಯನಳಾಗಿ ನೇಮಿಸಬೇಕಾಗಿ ವಗೈರೆ ಅರ್ಜಿದಾರಳು ದಾಕಲು ಮಾಡಿದ ಮೇಲಿನ ಅರ್ಜಿಯು ತನಿಖೆ ಬಗ್ಗೆ ತಾ. 7—4—1942ಕ್ಕೆ ಇಟ್ಟಿದೆ. ಈ ಕುರಿತು ಆಕ್ಷೇಪಣೆ ಉಳ್ಳವರು ಸದರಿ ದಿವಸ ಹಗಲು 10½ ಘಂಟೆಗೆ ಮೇಲಿನ ಕೋರ್ಟು ಮುಂದೆ ಖುದ್ದು ಯಾ ವಕೀಲರ ದ್ವಾರ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರೀ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(By Order of Court)

S. Narsapaya,
Vakil for Petitioner.

Mangalore, 20–3–42.

N

In

Between
Willie Co

Gregory C

To
All the

Notic given
application has been made to t
Court for a grant of Probate
the will dated the 25th
September 1928 of the p
and credits of Ida Cornelio
of Gregory Cornelio, Udipi
Udipi, late of Udipi Tow
died on the 16th day of N
1933 at Udipi Town,
petitioner Willie Cornelio
Borgius Cornelio of Udipi
cutor named in said
the husband's br son of
deceased and tha the 16th
of June 1942 has be
for the hearing of the
cation and that if you
oppose the same, you
caveat in this

G. Somashekar-na
Vakil for petit

Mangalore, 23–3–1942.



ಭಾರತದ ನೌಕಾಬಲಕ್ಕಾಗಿ ಹುಡುಗರು

ಭಾರತದ ನೌಕಾಬಲಕ್ಕೆ ಹುಡುಗರನ್ನು ಚುನಾಯಿಸುವದಕ್ಕಾಗಿ ನೌಕಾ ಶಾಖೆಯ ರಿಕ್ರೂಟಿಂಗ್ ಪಾರ್ಟಿಯೊಂದು ಕೆಳಗೆ ಕಂಡ ಸ್ಥಳಗಳಿಗೆ ಈ ತಾರೀಕುಗಳಲ್ಲಿ ಬರುವರು.

14ರಿಂದ 15½ ವರುಷದ ಹುಡುಗರು ಎಚ್. ಎಮ್. ಐ. ಎಸ್. "ದಿಲಾವರ್"ನಲ್ಲಿ ಶಿಕ್ಷಣವನ್ನು ಪ್ರಾರಂಭಿಸುವರು.

15ರಿಂದ 17 ವರ್ಷದ ಹುಡುಗರು ಶಿಕ್ಷಣಕ್ಕಾಗಿ ನೆಟ್ಟಗೆ ಎಚ್. ಎಮ್. ಐ. ಎಸ್, "ಬಹದ್ದೂರ್"ಗೆ ಸಾಗುವರು.

ಇದಕ್ಕೆ ಬೇಕಾದ ವಿದ್ಯಾಭ್ಯಾಸ

ಎಚ್. ಎಮ್. ಐ. ಎಸ್. "ದಿಲಾವರ್": ಕನಿಷ್ಟಪಕ್ಷ IV ಫಾರಂ ವರೆಗೆ ಓದಿರಬೇಕು. ಎಚ್. ಎಮ್. ಐ. ಎಸ್. "ಬಹದ್ದೂರ್": ಕನಿಷ್ಟಪಕ್ಷ V ಫಾರಂ ವರೆಗೆ ಓದಿರಬೇಕು.

ಮುಖ್ಯ ಸೂಚನೆ:—ಹುಡುಗರು, ತಂದೆಯಿಂದಾಗಲೀ, ತಂದೆಯಿಲ್ಲದಿದ್ದರೆ, ತಾಯಿಯಿಂದಾಗಲೀ, ತಂದೆ ತಾಯಿ ಇಬ್ಬರೂ ಇಲ್ಲದಿದ್ದರೆ, ಕಾಯಿದೆ ಗನುಸಾರವಾಗಿ ಒಪ್ಪಿಸಲ್ಪಟ್ಟ ಪಾಲಕರಿಂದಾಗಲೀ, ಹುಡುಗನು ನೌಕಾ ಬಲಕ್ಕೆ ಸೇರುವುದಕ್ಕೆ ಒಪ್ಪಿಗೆಯನ್ನು ಬರವಣಿಗೆಯಲ್ಲಿ ತರಬೇಕು. ಈ ಬರವಣಿಗೆಗೆ ಗೌರವಸ್ಥರಾದ ಯಾರಾದರೂ ಸಾಕ್ಷಿ ಹಾಕಬೇಕು. ಚುನಾಯಿಸಲ್ಪಟ್ಟ ಹುಡುಗರು 1942ನೇ ವರ್ಷ ಜುಲ್ಯಾ 3ನೇ ತಾರೀಕಿನ ದಿವಸ ಕರಾಚಿಗೆ ಶಿಕ್ಷಣಕ್ಕಾಗಿ ಬಂದು ಸೇರಬೇಕು. ರೈಲ್ವೆ ವಾರಂಟುಗಳೂ ಮತ್ತು ಇತರ ಅಜ್ಜೆಗಳೂ ಅವರಿಗೆ "ಜಾಹೀರು" ಮಾಡಲ್ಪಡುವುದು.

ಸೇರುವಾಗ ಸಂಬಳ

ಎಚ್. ಎಮ್. ಐ. ಎಸ್. "ದಿಲಾವರ್" ತಿಂಗಳಿಗೆ 10 ರೂಪಾಯಿ.
ಎಚ್. ಎಮ್. ಐ. ಎಸ್. "ಬಹದ್ದೂರ್" ತಿಂಗಳಿಗೆ 15 ರೂಪಾಯಿ.

ಆಹಾರ ಮತ್ತು ಬಟ್ಟೆಬರೆಗಳು ಪುಕ್ಕಟೆ.

ಎಚ್. ಎಮ್. ಐ. ಎಸ್. "ದಿಲಾವರ್" ಮತ್ತು ಎಚ್. ಎಮ್. ಐ. ಎಸ್. "ಬಹದ್ದೂರ್"ನಲ್ಲಿ ಅತ್ಯುತ್ತಮವಾದ ಶಿಕ್ಷಣವು ದೊರಕುವುದು ಮತ್ತು ಶಿಕ್ಷಣ ಪಡೆದವರಿಗೆ ರಾಯಲ್ ಇಂಡಿಯನ್ ನೌಕಾ ಬಲದಲ್ಲಿ ಒಳ್ಳೆ ನೌಕರಿಗಳು ಸಿಕ್ಕುವ ಸಂಭವಗಳುಂಟು. ಶಿಕ್ಷಣಕ್ಕೆ ಹುಡುಗರನ್ನು ಚುನಾಯಿಸುವುಕ್ಕಾಗಿ ರಿಕ್ರೂಟಿಂಗ್ ಪಾರ್ಟಿಯವರು ಈ ಜಿಲ್ಲಾಗಳಿಗೆ ಕೆಳಗೆ ಕಂಡ ತಾರೀಕುಗಳಲ್ಲಿ ಬರುವರು.

ತಲಪುವ ತಾರೀಕು ಮತ್ತು ವೇಳೆ	ಚುನಾವಣೆ ನಡೆಯುವ ಸ್ಥಳ ಮತ್ತು ತಾರೀಕು		ಅಲ್ಲಿಂದ ಹೊರಡುವ ವೇಳೆ
ಮಾರ್ಚಿ 12–17.40	ಮದರಾಸ್	13–14 ಮಾರ್ಚಿ	ಮಾರ್ಚಿ 15–20.45
,, 16–05.48	ತಿರುಚಿನಾಪಳ್ಳಿ	16–ಮಾರ್ಚಿ	ಮಾರ್ಚಿ 17–07.20
,, 17–11.27	ಮಧುರೆ	18–ಮಾರ್ಚಿ	ಮಾರ್ಚಿ 19–11.45
,, 19–16.13	ತಿನ್ನವೆಲ್ಲಿ	20–ಮಾರ್ಚಿ	ಮಾರ್ಚಿ 21–08.33
,, 21–18.50	ತಿರುವನಂದಪುರಂ	–ಮಾರ್ಚಿ	ಮಾರ್ಚಿ 23–18.52
,, 23–21.27	ಕ್ವಿಲಾನ್	–ಮಾರ್ಚಿ	ಮಾರ್ಚಿ 25–09.0(
,, 25–14.00	ಎರ್ನಾಕುಲಂ	ಮಾರ್ಚಿ	ಮಾರ್ಚಿ 27–13.(
,, 27–16.01	ತಿರುಚ್ಚೂರು	ಮಾರ್ಚಿ	ಮಾರ್ಚಿ 29–11
,, 29–17.07	ಕೆಲಿಕಟ್	ಮಾರ್ಚಿ	ಮಾರ್ಚಿ 31–
,, 31–13.38	ಕೆನನೂರ್	ಏಪ್ರಿಲ್	ಎಪ್ರಿಲ್
ಎಪ್ರಿಲ್ 2–14.55	ಮಂಗಳೂರು	ಏಪ್ರಿಲ್	ಎಪ್ರಿಲ್
,, 4–17.00	ಮರ್ಕಾರ	6–ಏಪ್ರಿಲ್	ಎಪ್ರಿ
,, 7–19.01	ಪಾಲ್‌ಗಾಟ್	8–ಎಪ್ರಿಲ್	ಎಪ್ರಿ
,, 9–12.56	ಕೊಯಂಬತ್ತೂರ್	10–ಎಪ್ರಿಲ್	ಎಪ್ರಿ
,, 12–12.24	ಸೇಲಮ್	13–ಎಪ್ರಿಲ್	
,, 14–17.40	ಬೆಂಗಳೂರು	15–ಎಪ್ರಿ	

ಮೇಲೆ ಹೇಳಿರುವ "ತಲಪುವ" ವೇಳೆ ಮತ್ತು "ಹೊರಡುವ" ವೇಳೆ ಇವೆಲ್ಲಾ ಸರಾಸರಿ ಮತ್ತು ಬದಲಾವಣೆ ಹೊಂದಬಹುದು. ಚುನಾವಣೆಯ ವಿಷಯವಾಗಿ ಎಲ್ಲಾ ಎವರಗಳನ್ನು ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದಾಗಲೀ ಅಥವಾ ಪಾಠಶಾಲೆಗಳ ಜಿಲ್ಲಾ ಇನ್‌ಸ್ಪೆಕ್ಟರ್‌ಗಳಿಂದಾಗಲೀ ಕೇಳಿ ತಿಳಿದುಕೊಳ್ಳಬಹುದು. ವಿದ್ಯಾಭ್ಯಾಸದ ಪರೀಕ್ಷೆಗಳೂ ಮತ್ತು ಡಾಕ್ಟರ್ ಹೇಳಿದ ತಾರೀಕುಗಳ ಭ್ಯಾಸದ ಇ[illegible]ವರು ಪ್ರಸಿದ್ಧಿ ಪಡಿಸಿದ ಜಾ[illegible] ಗಂಟೆಗೆ ನಡೆಯುವುದು. ಅರ್ಜಿದಾರರೆಲ್ಲರೂ ಬೆಳಿಗ್ಗೆ ಬರುವುದೇ ಉತ್ತಮ. ಯಾತಕ್ಕೆಂದರೆ ಮಧ್ಯಾಹ್ನದ ವೇಳೆಯಲ್ಲಿ ಪರೀಕ್ಷೆಗಳು ನಡೆಯದೇ ಇರಬಹುದು.

ಯುದ್ಧಕಾಲದ ಬ್ರಿಟನಿನಲ್ಲಿ ಭಾರತೀಯರು

ಬ್ರಿಟನಿನಲ್ಲಿ ಈಗಲೂ ಇರುವ ನೂರಾರು ಮಂದಿ, ನಾನಾ ವೃತ್ತಿಯ ಭಾರತೀಯರಲ್ಲಿ, ಡಾಕ್ಟರರ ಸಂಖ್ಯೆಯೇ ಹೆಚ್ಚಿನದಾಗಿದೆ. ಬ್ರಿಟನಿನಲ್ಲಿ ಈಗಿರುವ ಭಾರತೀಯ ಡಾಕ್ಟರುಗಳ ಸಂಖ್ಯೆ ಸುಮಾರು ಳಂಂರಷ್ಟಿದೆ. ಇವರಲ್ಲಿ ಸುಮಾರು ನೂರು ಮಂದಿ ಲಂಡನಿನಲ್ಲಿಯೇ ಇದ್ದಾರೆ. ಇವರನ್ನು ಲಂಡನ್, ಬರ್ಮಿಗ್ ಹ್ಯಾಂ, ಎಡಿನ್‌ಬರೋ, ಗ್ಲಾಸ್ಗೊ ಮೊದಲಾದ ಕಡೆ ನಡೆಯುವ ಆಗಾಗಳಿನ ಸಂತೋಷ ಕೂಟಗಳಲ್ಲಿ ಕಾಣಬಹುದು. ಅವರೆಲ್ಲರಿಗೂ ಅಲ್ಲಿ ವಿಶೇಷವಾದ ಮಾನಗೌರವಗಳು ಸಲ್ಲುತ್ತಿವೆ. ಇವರಲ್ಲಿ ಒಬ್ಬರನ್ನು ಬ್ರಿಟಿಶ್ ಜನರು ಲಂಡನಿನ ಒಂದು ಪ್ರಾಮುಖ್ಯ ವಿಭಾಗದ ಮೇಯರರಾಗಿ ಆರಿಸಿಕೊಂಡಿದ್ದಾರೆ. ಇವರಲ್ಲಿ ಅನೇಕರು ಶಸ್ತ್ರ ಕ್ರಿಯೆ, ನೇತ್ರವೈದ್ಯವಿದ್ಯೆ ಮೊದಲಾದುವುಗಳಲ್ಲಿ ಪಾರಂಗತರೂ, "ಸ್ಪೆಶಲಿಸ್ಟರೂ" ಆಗಿದ್ದಾರೆ. ಇವರಲ್ಲಿ ಹಲವು ಮಂದಿ ಖಾಸಿಗೆ ಪ್ರಾಕ್ಟೀಶನರಾಗಿ ಬ್ರಿಟನಿನ ನಾನಾ ಭಾಗಗಳಲ್ಲಿ ಜನಸೇವೆ, ಜನಾಶ್ರಯಗಳಿಂದಲೇ ಇರತಕ್ಕವರಾಗಿದ್ದಾರೆ. ಈ ಡಾಕ್ಟರರುಗಳು ಸ್ವಶಕ್ತಿ, ಸ್ವೋದ್ಯಮ, ಸ್ವಪ್ರಯಾಸಗಳಿಂದಲೇ ಅಲ್ಲಲ್ಲಿ ತಮ್ಮ ಪ್ರಾಕ್ಟೀಸನ್ನು ಸ್ಥಾಪಿಸಿಕೊಂಡವರು.

ಇಲ್ಲಿ ಭಾರತೀಯರ ವಕೀಲರ ಸಂಖ್ಯೆ ಕಡಿಮೆ; ಇರುವ ಕೆಲವು ಭಾರತೀಯ ಬ್ಯಾರಿಸ್ಟರರು ಪ್ರೀವೀ-ಕೌನ್ಸಿಲಿನಲ್ಲಿ ಕೆಲಸಮಾಡುವವರು. ಭಾರತೀಯ ವ್ಯಾಪಾರಿಗಳಲ್ಲಿ ಮೊದಲು ಹಲವು ಮಂದಿ ಇಲ್ಲಿದ್ದರೂ ಯುದ್ಧದಿಂದ ಈಗಿವರ ಸಂಖ್ಯೆ ಕಡಿಮೆಯಾಗಿದೆ. ಇರುವ ಕೆಲ· ವ್ಯಾಪಾರಿಗಳಿಗೂ ಹಡಗುಗಳ ಸೌಕರ್ಯ ಸಾಲದೆ, ಅವರು ತಮ್ಮ ವ್ಯಾಪಾರವನ್ನು "ಬಂದ್" ಮಾಡಬೇಕಾಗಿ ಬಂದಿದೆ.

ಮದ್ರಾಸು ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ದಶಂಬರ ತಿಂಗಳಲ್ಲಿ ಧನಸಹಾಯ ಮಾಡಿದವರ ಹೆಸರಿನ ಪಟ್ಟಿ

ಭಾಗ ೩

25—0—0

ಸೂಜೀರ್ ಐತಪ್ಪ ಶೆಟ್ಟಿ, ಮರ್ದೋಳಿ
ರಾಮಕೃಷ್ಣಯ್ಯ.

20—0—0

ಕೊರಗ ಶ್ಯಾನುಭಾಗ.

15—0—0

ಬಾರಿಕಾಡಿ ಕೃಷ್ಣಯ್ಯ.

10—0—0

ಎ. ತಿಮ್ಮಪ್ಪ ಪೂಂಜ; ಪಿ. ನಾರಾಯಣಯ್ಯ; ಬಿ. ಕೊರಗಪ್ಪ.

5—0—0

ಡಿ. ಆರ್. ವೆಂಕಟೇಶ ಅಯ್ಯರ್; ಜಿನ್ನಪ್ಪ ಶೆಟ್ಟಿ; ಜೆ. ಬಿ. ರೊಡ್ರಿಗ್ಸ್; ಜಿನ್ನಪ್ಪ ನಾಯಕ್; ಜೊಶಿ ವಾಮನ ಭಟ್; ಮ್ಯಾಳಪ್ಪ ಶೆಟ್ಟಿ.

ಗಂಗಾ
ಶ್ರೀ ಚಿನ್ನದ ಗನಿಯಾ
ಳ್ಳ ಲೋಹದ ಮನೆಯಿದು
ಬಿಡಗಿನ ನೆಲೆಯಿದು ॥ ೧ ॥
ನ್ನಡ ನಾಡಿದು
ಲೆಗಳ ನಾಡಿದು
ಕವಿಗಳ ಗೂಡಿದು
ೀರರ ನಾಡಿದು
ರದ ನಾಡಿದು
ಬಗಿನ ನೆಲೆಯಿದು ॥ ೨ ॥
ನ್ನಡ ನಾಡಿದು
ಹುಟ್ಟಿದ [illegible]ಡಿದು
ಜನಿಸಿ[illegible]ದು
ಹುಟ್ಟಿದ [illegible]ಡಿದು
ನಾಡಿದು
ನಾಡಿದು ॥ ೩ ॥
ನಾಡಿದು
[illegible]ಡಿದು
[illegible]ಡಿದು
ತೋರುವ ನಾಡಿದು
ಬೀರುವ ನಾಡಿದು
ನಾರುವ ನಾಡಿದು ॥ ೪ ॥
ಕನ್ನಡ ನಾಡಿದು
ಹುಟ್ಟಿದ ನಾಡಿದು
ಅನ್ನವೀಯುವ ನಾಡಿದು
ತಾಯಿ ನಾಡಿದು ನಮ್ಮದು ॥ ೫ ॥

(ಶ್ರೀ। ಭೋಗಿಶೆಟ್ಟಿ ಜೂಗಪ್ಪನವರ ಸತೀಮಣಿ ಗಂಗಮ್ಮ ಇವರ ಕುಮಾರಿ ಇಂದಿರ, ಶಾರದ ಇವರ ಪ್ರೇಮ ವಿಶ್ವಾಸಗಳ ಕಾಣಿಕೆ)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಯಂಸೇವಕ ಶಿಬಿರ

ಡಾ। ನಾ. ಸು. ಹರ್ಡಿಕರರು ಬರಲಿರುವರು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಯಂಸೇವಕ ದಲಗಳನ್ನು ಸ್ಥಾಪಿಸುವ ಬಗ್ಗೆ ಸ್ವಯಂಸೇವಕ ತರಬೇತಿ ಶಿಬಿರವೊಂದನ್ನು ಕಟಪಾಡಿಯಲ್ಲಿ, ಬರುವ ಎಪ್ರಿಲ್ ತಿಂಗಳ ತಾ. ೧೫ರ ಸುಮಾರಿಗೆ ತೆರೆವುದೆಂದು ನಿರ್ಧಾರವಾಗಿದೆ. ತರಬೇತಿ ಬಗ್ಗೆ, ಡಾ। ನಾ. ಸು. ಹರ್ಡಿಕರ ಇವರು ಆಗಮಿಸುವವರಿದ್ದಾರೆ. ಶ್ರೀ। ಪಾಂಗಾಳ ಲಕ್ಷ್ಮಿ ನಾರಾಯಣ ನಾಯ್ಕ, ಇವರು ಈ ಶಿಬಿರದ ಮೇಲ್ವಿಚಾರಕ್ಕಾಗಿ, ಕೊಂಗ್ರೆಸ್ ಕಮಿಟಿಯಿಂದ ನೇಮಿಸಲ್ಪಟ್ಟಿರುವರು. ಜಿಲ್ಲೆಯ ಎಲ್ಲ ಸರ್ಕಲುಗಳ ಕಾರ್ಯಕರ್ತರೂ ಮಹಾ ಜನರೂ ಶ್ರೀ। ಪಾಂಗಾಳ ಲಕ್ಷ್ಮಿ ನಾರಾಯಣ ನಾಯ್ಕರಿಗೆ ಯಾವತ್ತೂ ಸಹಾಯ-ಸಹಕಾರಗಳನ್ನಿತ್ತು, ಶಿಬಿರವು ಯಶಸ್ವಿಯಾಗುವಂತೆ ಸಾಧಿಸಿಕೊಡಬೇಕಾಗಿ ವಿನಂತಿ.

ಕುಡ್ಪಿ ವಾಸುದೇವ ಶೆಣೈ,
ಪ್ರಧಾನ ಕಾರ್ಯ[illegible]ಕ,
ದ. ಕ. ಜಿ[illegible] ಕಮಿಟಿ.
ಮ[illegible]ರು, ತಾ.

and Published by B. Vittal Rau at the Kanteerava Office, Maidan North Road, Mangalore
by M. Babyraya Prabhu, B. A., at the Mangalore Press, Car Street, Mangalore.